ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ವಾತೆಜಂಆ/ಮನವಿ/ಕ/ವಾ.ಶಾ/2024-25/1396/1 ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ,
(ಮನವಿಗಳು) ಕಲಬುರಗಿ ವಿಭಾಗ, ಕಲಬುರಗಿ
ದಿನಾಂಕ:-04.03.2025

## : ಟೆಂಡರ್ ಪ್ರಕಟಣೆ :

ಸನ್ 2025-26 ನೇ ಸಾಲಿಗೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು) ಕಲಬುರಗಿ ವಿಭಾಗ ಕಲಬುರಗಿ ಹಾಗೂ ಅಧೀನ ಕಛೇರಿಗಳಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ ಕ್ರಮವಾಗಿ ಒಂದು (01) ಮಾಲೀಕರೇ ಚಾಲಕರಾಗಿರುವ /ಅಧಿಕೃತ ಟ್ರಾವೆಲ್ ಏಜನ್ಸಿದಾರರು/ಸಂಸ್ಥೆ ಮುಖಾಂತರ ಮಾಸಿಕ ಬಾಡಿಗೆ ಆಧಾರದ ಮೇಲೆ ಖಾಸಗಿ ವಾಹನಗಳನ್ನು **ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/96/ಶಿವಾನೀ/2012 ದಿನಾಂಕ:23-08-2012** ರಲ್ಲಿ ನಿಗದಿ ಪಡಿಸಿರುವ ಷರತ್ತಿಗೊಳಪಟ್ಟು ಮತ್ತು **ವಾಣಿಜ್ಯ ತೆರಿಗೆ ಆಯುಕ್ತರವರ ದರ ಪರಿಷ್ಕರಣೆಯ ಸುತ್ತೋಲೆ ಸಂಖ್ಯೆ: ವಿಹೆಚ್‌ಟಿ/ಸಿಆರ್-22/2019-20 ದಿನಾಂಕ:27/04/2022** ರಲ್ಲಿ ನಿಗದಿಪಡಿಸಿರುವ ಬಾಡಿಗೆ ದರ ಹಾಗೂ ಷರತ್ತುಗಳ ಆಧಾರದ ಮೇಲೆ ಪ್ರತಿ ವಾಹನಕ್ಕೆ 2,500 ಕಿ.ಮೀ ಗೆ ಗರಿಷ್ಠ ಮಾಸಿಕ ಮೊತ್ತ ರೂ.35,000-00 ರಂತೆ ಹವಾ ನಿಯಂತ್ರಿತವಲ್ಲದ ವಾಹನಕ್ಕೆ **(ಒಂದು ವರ್ಷಕ್ಕೆ ರೂ. 4,20,000/- )** ಹಾಗೂ ಹವಾ ನಿಯಂತ್ರಿತ ವಾಹನಕ್ಕೆ ರೂ.40,000-00ಗಳಿಗೆ ಒಳಪಟ್ಟಿರುತ್ತದೆ, **(ಒಂದು ವರ್ಷಕ್ಕೆ ರೂ.4,80,000/-)** ಸನ್ 2018 ಮತ್ತು ನಂತರದ ವರ್ಷಗಳಲ್ಲಿ ತಯಾರಾದ ಮಾದರಿಯ ವಾಹನಗಳನ್ನು ಮಾತ್ರ ಪರಿಗಣಿಸಲಾಗುವುದು ಈ ಕುರಿತು ಟೆಂಡರ್ ವಿವರಗಳನ್ನು ಇಲಾಖೆಯ ಸೂಚನಾ ಫಲಕದಲ್ಲಿ ಹಾಗೂ ವೆಬ್‌ಸೈಟ್ https://gst.kar.nic.in/ ನಲ್ಲಿ ಸಂಬಂಧಿಸಿದ ವಿವರವಾದ ಷರತ್ತುಗಳನ್ನು ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದೊಳಗೆ ವಾಹನ ಶಾಖೆಗೆ ಅಥವಾ ದೂರವಾಣಿ ಸಂಖ್ಯೆ:08472-256897 ಯನ್ನು ಸಂಪರ್ಕಿಸಬಹುದು.

**ವಿವರಗಳು**

| ಕ್ರಂ.ಸಂಖ್ಯೆ | ಕಛೇರಿ | ವಾಹನಗಳ ಸಂಖ್ಯೆ |
|---|---|---|
| 1 | ಕಲಬುರಗಿ | 01 |
| | ಒಟ್ಟು | **01** |

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 12.03.2025 ಸಮಯ ಸಂಜೆ 5.00 ಗಂಟೆಯವರೆಗೆ**

**ಟೆಂಡರ್ ತೆರೆಯುವ ದಿನಾಂಕ: 14.03.2025 ಸಮಯ ಬೆಳಿಗ್ಗೆ 11.00 ಗಂಟೆಗೆ**

(ದ್ವಿ-ಲಕೋಟೆ ಪದ್ಧತಿ)

ಸಹಿ/-

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಮನವಿಗಳು) ಕಲಬುರಗಿ ವಿಭಾಗ, ಕಲಬುರಗಿ

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು**
**(ಮನವಿಗಳು) ಕಲಬುರಗಿ ವಿಭಾಗ,**
**ಕಲಬುರಗಿ**

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ವಾತೆಜಂಆ/ಮನವಿ/ಕ/ವಾ.ಶಾ/2024-25 1396/2

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ,
(ಮನವಿಗಳು) ಕಲಬುರಗಿ ವಿಭಾಗ, ಕಲಬುರಗಿ
ದಿನಾಂಕ:-04.03.2025.

# ಟೆಂಡರ್ ಪ್ರಕಟಣೆ

ವಿಷಯ:- ಟೆಂಡರ್ ಮುಖಾಂತರ ಅಧಿಕೃತ ಟ್ರಾವೆಲ್ ಏಜೆನ್ಸಿ/ಸಂಸ್ಥೆ/ಮಾಲಿಕರೇ ವಾಹನ ಚಾಲಕರಾಗಿರುವದರಿಂದ ಖಾಸಗಿ ವಾಹನಗಳ ಸೇವೆಯನ್ನು ಒದಗಿಸುವ ಕುರಿತು.

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/96/ಶಿವಾನಿ/2012, ದಿನಾಂಕ:23-08-2012.
2) ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು ಬೆಂಗಳೂರು ಇವರ ಪತ್ರ ಸಂಖ್ಯೆ:ವಿಹೆಚ್‌ಟಿ/ಸಿಆರ್-11/2024-25 ದಿನಾಂಕ:15-02-2025.

************

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು), ವಾಣಿಜ್ಯ ತೆರಿಗೆ ಕಾರ್ಯಾಲಯ, ನೆಲ ಮಹಡಿ ರೈಲ್ವೇ ಸ್ಟೇಷನ್ ಹತ್ತಿರ, ಕಲಬುರಗಿ ಇವರು ವಿಭಾಗದ ಕಛೇರಿಯ ಉಪಯೋಗಕ್ಕಾಗಿ 01 ಖಾಸಗಿ ವಾಹನವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖ(2) ರ ಮಾನ್ಯ ಆಯುಕ್ತರವರ ಪತ್ರದಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ.

ಅಧಿಕೃತ ಟ್ರಾವೆಲ್ ಏಜೆನ್ಸಿ/ಸಂಸ್ಥೆ/ ಮಾಲಿಕರೇ ವಾಹನ ಚಾಲಕರಾಗಿರುವದರಿಂದ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳವರು ಅರ್ಜಿಯನ್ನು ಕಛೇರಿಗೆ ಈ ಕೆಳಕಂಡ ವಿವರಗಳೊಂದಿಗೆ ಸಲ್ಲಿಸಬಹುದಾಗಿರುತ್ತದೆ.

1. ಅರ್ಜಿ ಸಲ್ಲಿಸುವ ವಿಧಾನ : ದ್ವಿ-ಲಕೋಟೆ ಪದ್ಧತಿ
2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 12.03.2025 ಸಂಜೆ 5.00 ಗಂಟೆಯವರೆಗೆ
3. ಟೆಂಡರ್ ತೆರೆಯುವ ದಿನಾಂಕ : 14.03.2025 ಬೆಳಿಗ್ಗೆ 11.00 ಗಂಟೆಗೆ
4. ವಾಹನದ ಮಾದರಿ : 2018ರಲ್ಲಿ ತಯಾರಾದ ಮತ್ತು ನಂತರದ ವರ್ಷಗಳಲ್ಲಿ ತಯಾರಾದ.

- ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನ ಕೌಶಲ್ಯವನ್ನು ಪರಿಶೀಲಿಸಿದ ನಂತರವೇ ವಾಹನಗಳನ್ನು ತೆಗೆದುಕೊಳ್ಳಲಾಗುವುದು.

5. ಮಾಸಿಕ ಬಾಡಿಗೆಯ ಪರಿಷ್ಕೃತ ಪಟ್ಟಿ :

| ಕ್ರಸಂ | ಹವಾ ನಿಯಂತ್ರಣ ರಹಿತ ವಾಹನಗಳಿಗೆ (Non AC) | ರೂ.ಗಳಲ್ಲಿ |
|---|---|---|
| ಅ) | ಮಾಸಿಕ 2,500 ಕಿ.ಮೀ ಅಥವಾ 300 ಗಂಟೆಗಳು | ರೂ.35,000/- + Taxes |
| ಆ) | 2,500 ಕಿ.ಮೀ ನಂತರ ಪ್ರತಿ ಕಿ.ಮೀ ಗೆ | ರೂ.10/- + Taxes |
| ಇ) | 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ.100/- + Taxes |

| ಕ್ರಸಂ | ಹವಾ ನಿಯಂತ್ರಿತ ವಾಹನಗಳಿಗೆ (AC) | ರೂ.ಗಳಲ್ಲಿ |
|---|---|---|
| ಅ) | ಮಾಸಿಕ 2,500 ಕಿ.ಮೀ ಅಥವಾ 300 ಗಂಟೆಗಳು | ರೂ.40,000/- + Taxes |
| ಆ) | 2,500 ಕಿ.ಮೀ ನಂತರ ಪ್ರತಿ ಕಿ.ಮೀ ಗೆ | ರೂ.12/- + Taxes |
| ಇ) | 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ.150/- + Taxes |

6. ವಾಹನದ ಗುತ್ತಿಗೆ ಸೇವಾ ಅವಧಿ :ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ವಿಭಾಗಕ್ಕೆ ಒದಗಿಸುವ ಕಾಲಮಿತಿಯು **ದಿನಾಂಕ:01.04.2025 ರಿಂದ 31.03.2026** ರವರೆಗೆ ಇರುತ್ತದೆ. ಅಗತ್ಯವಿದ್ದರೆ ಇದೇ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಥವಾ ಇನ್ನೂ ಹೆಚ್ಚಿನ ಷರತ್ತುಗಳ ಜೊತೆಗೆ ಒಂದು ತ್ರೈಮಾಸಿಕದ ಅವಧಿಗೆ ವಾಹನ ಮಾಲೀಕರು ಮತ್ತು ಈ ಇಲಾಖೆಯ ಆಯುಕ್ತರ ಲಿಖಿತ ಇಚ್ಚೆಯ ಮೇರೆಗೆ ಮುಂದುವರೆಸಬಹುದಾಗಿದೆ. ಇದಕ್ಕೂ ಮೊದಲು ಕರಾರು ರದ್ದುಗೊಳಿಸುವ ಹಕ್ಕು ಮಾನ್ಯ ಆಯುಕ್ತರು/ ಜಂಟಿ ಆಯುಕ್ತರವರದ್ದಾಗಿರುತ್ತದೆ.

7. ಅರ್ಜಿದಾರರು ಕಛೇರಿಗೆ ಸಲ್ಲಿಸಬೇಕಾದ ನಮೂನೆಯ ವಿವರಗಳು:

ಅ. ಅರ್ಜಿದಾರರ ಹೆಸರು, ಅರ್ಜಿದಾರರ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳು.

ಆ. ವಿಳಾಸದ ದಾಖಲೆಗಳು: ಮತದಾರರ ಗುರುತಿನ ಚೀಟಿ / ರೇಷನ ಕಾರ್ಡ / ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಚುನಾವಣಾ ಗುರುತಿನ ಚೀಟಿ ಹಾಗೂ ಖಾಯಂ ವಿಳಾಸ ದಾಖಲೆ.

ಇ. ಬ್ಯಾಂಕ್ ಖಾತೆಯ ವಿವರಗಳು: ಉಳಿತಾಯ ಖಾತೆ ಹೊಂದಿರುವ ಬ್ಯಾಂಕಿನ ಹೆಸರು, ವಿಳಾಸ, ಉಳಿತಾಯ ಖಾತೆಯ ಸಂಖ್ಯೆ ಹಾಗೂ ಚೆಕ್‌ನ ಪ್ರತಿ.

ಈ. ಇತರ ದಾಖಲಾತಿಗಳು: ಕಡ್ಡಯಾವಾಗಿ ಪ್ಯಾನ್ ಕಾರ್ಡ ಆಧಾರ್ ಕಾರ್ಡ ಪ್ರತಿಗಳು ಹಾಗೂ ಮಾಲೀಕರಿಗೆ ಸಂಬಂಧಿಸಿದಂತೆ ಡ್ರೈವಿಂಗ್ ಲೈಸನ್ಸ್, ಚಾಲಕರ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ.

8. ಖಾಸಗಿ ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳು:

ಅ. ವಾಹನದ ನೊಂದಣಿ ಪುಸ್ತಕದ ಪ್ರತಿ.

ಆ. ವಾಹನದ ವಿಮಾ ಪಾಲಿಸಿಯ ಪ್ರತಿ.

ಇ. ಪ್ರಾದೇಶಿಕ ಸಾರಿಗೆ ಅಧಿಕಾರಿ (RTO) ಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ.

ಈ. ರಸ್ತೆ ತೆರಿಗೆ (Road Tax) ಯನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಿರುವ ವಿವರದ ಪ್ರತಿ.

ಉ. ವಾಯು ಮಾಲಿನ್ಯ ಇಲಾಖೆಯಿಂದ ಪಡೆದ ಪ್ರಮಾಣ ಪತ್ರ.

9. ಟೆಂಡರ್ ಪ್ರಕಟಣೆಯ ಷರತ್ತು ಮತ್ತು ನಿಬಂಧನೆಗಳು:

1. ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಷರತ್ತುಗಳಲ್ಲದೇ ಸುಗಮ ಸೇವೆಯ ನಿರ್ವಹಣೆಗಾಗಿ ಬೇಕಾಗುವ ಇತರ ಯಾವುದೇ ಷರತ್ತುಗಳನ್ನು ವಿಧಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು), ಕಲಬುರಗಿ-585102 ಇವರು ಹೊಂದಿರುತ್ತಾರೆ.

2. ದಿನಾಂಕ:01.04.2025 ರಿಂದ ಅನ್ವಯವಾಗುವಂತೆ, ಈ ಹಿಂದೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ಸರಕು ಮತ್ತು ಸೇವಾ ತೆರಿಗೆ ಕಛೇರಿ, ಕಲಬುರಗಿಯಲ್ಲಿ ಸತತವಾಗಿ ಐದು (5) ವರ್ಷಗಳ ಕಾಲ ಈ ವಿಭಾಗದಲ್ಲಿ ಸೇವೆ ಸಲ್ಲಿಸಿರುವ ಯಾವುದೇ ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಮಾಲೀಕರು ಅರ್ಜಿ ಸಲ್ಲಿಸುವಂತಿಲ್ಲ.

3. ಅರ್ಜಿದಾರರು ಈ ಹಿಂದೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ಸರಕು ಮತ್ತು ಸೇವಾ ತೆರಿಗೆ ಕಛೇರಿ, ಕಲಬುರಗಿಯಲ್ಲಿ ಸತತವಾಗಿ ಐದು (5) ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿರುವುದಿಲ್ಲವೆಂದು ದೃಢೀಕರಣವನ್ನು ಅರ್ಜಿಯೊಂದಿಗೆ ಸಲ್ಲಿಸುವುದು. ಒಂದು ವೇಳೆ ತಪ್ಪಾದ ಮಾಹಿತಿಯನ್ನು ನೀಡಿದ್ದಲ್ಲಿ ಸೇವೆಯನ್ನು ತಕ್ಷಣ ರದ್ದುಗೊಳಿಸಲಾಗುವುದು.

4. ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸ್ವಯಂ ದೃಢೀಕರಣದೊಂದಿಗೆ ಮುಚ್ಚಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ ಖಾಸಗಿ ವಾಹನಗಳ ಸೇವೆ ಎಂದು ನಮೂದಿಸುವುದು.

5. ಪೂರ್ಣ ವಿವರಗಳು ಹಾಗೂ ಎಲ್ಲಾ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

6. ಅರ್ಜಿಯನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು), ವಾಣಿಜ್ಯ ತೆರಿಗೆ ಕಾರ್ಯಾಲಯ, ನೆಲ ಮಹಡಿ, ರೈಲ್ವೇ ಸ್ಟೇಷನ್ ಹತ್ತಿರ, ಕಲಬುರಗಿ-585102 ಇವರ ಕಛೇರಿಯಲ್ಲಿ ಸಲ್ಲಿಸುವುದು.

7. ಅರ್ಜಿಯನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯುವುದು ಹಾಗೂ ಕಾರ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ನಿಯಮಗಳು ಮತ್ತು ಷರತ್ತುಗಳು ವಿವರಗಳ ಪಟ್ಟಿ ಅನ್ವಯ ಕಡ್ಡಾಯವಾಗಿ ನಿಯಮಗಳನ್ನು ಅರ್ಹಗೊಳ್ಳುವ ವಾಹನ ಮಾಲೀಕರು ಕಡ್ಡಾಯವಾಗಿ ಪಾಲಿಸತಕ್ಕದ್ದು.

8. ಅರ್ಹಗೊಂಡು ಆಯ್ಕೆಯಾದ ವಾಹನ ಮಾಲೀಕರು ತಮಗೆ ನೀಡಿದ ಕಾರ್ಯಾದೇಶದಂತೆ ಕಾರ್ಯ ನಿರ್ವಹಿಸದಿದ್ದಲ್ಲಿ, ಅವರ ಸೇವೆಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ರದ್ದುಪಡಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಇಲಾಖೆಯ ಜಂಟಿ ಆಯುಕ್ತರು (ಮನವಿಗಳು), ಕಲಬುರಗಿ ಇವರು ಹೊಂದಿರುತ್ತಾರೆ.

9. ಅನಾರೋಗ್ಯವೂ ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ತಿಂಗಳಲ್ಲಿ ಒಂದು ದಿನ ಮಾತ್ರ ಕಛೇರಿ ಮುಖ್ಯಸ್ಥರಿಂದ/ಹಂಚಿಕೆಯಾದ ಅಧಿಕಾರಿಯವರಿಂದ ಅಥವಾ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ-ಚಾಲಕರು ರಜೆ ಪಡೆಯಬಹುದು. ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆಯನ್ನು ಕಡ್ಡಾಯ ಗೈರುಹಾಜರಿ ದಿವಸ ಎಂದು ಪರಿಗಣಿಸಿ ಬಾಡಿಗೆ ಕಡಿತಗೊಳಿಸಲಾಗುವುದು.

**ಜೊತೆಗೆ ಸಾರ್ವತ್ರಿಕ ರಜೆ ದಿನಗಳಲ್ಲಿ ಅಗತ್ಯ ಬಿದ್ದಾಗ ತುರ್ತು ಕೆಲಸಗಳ ಸಂದರ್ಭಗಳಲ್ಲಿ ವಾಹನ ಚಾಲಕರು ಹೆಚ್ಚುವರಿ ಬಾಡಿಗೆಯನ್ನು ನಿರೀಕ್ಷಿಸದೆ ಕಛೇರಿ ಕರ್ತವ್ಯ ನಿರ್ವಹಿಸಲು ಸಿದ್ದರಿರಬೇಕು.**

10. ಮಾಸಿಕ ಬಾಡಿಗೆ ಆಧಾರದ ಮೇಲೆ ಹಾಗೂ ಆದೇಶದಲ್ಲಿನ ದರಪಟ್ಟಿಗೆ ಒಳಪಟ್ಟು ಮಾತ್ರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುತ್ತದೆ.

11. ಖಾಸಗಿ ವಾಹನ ಚಾಲಕರು ಕಟ್ಟುನಿಟ್ಟಾಗಿ ಸಮಯಪಾಲನೆ ಮಾಡತಕ್ಕದ್ದು ಕಛೇರಿ ಅಧಿಕಾರಿಗಳು ಸಂಬಂಧಿಸಿದಂತೆ ಎಲ್ಲಾ ಕಛೇರಿ ಕಾರ್ಯ ನಿರ್ವಹಣೆಗೆ ಕಾಲಮಿತಿಯ ನಿರ್ಬಂಧವಿಲ್ಲದೆ ನಿರ್ವಹಿಸಕ್ಕದ್ದು. ವಾಹನ ಉಪಯೋಗಿಸುವ ಕಛೇರಿಯ ಮುಖ್ಯಸ್ಥರು/ ಹಂಚಿಕೆಯಾದ ಅಧಿಕಾರಿಯವರಿಂದ ಈ ಕುರಿತು ದೂರುಗಳು ಬಂದಲ್ಲಿ ಅಂತಹ ವಾಹನದ ಬಳಕೆಯನ್ನು ತಕ್ಷಣ ನಿಲ್ಲಿಸುವ ಅಥವಾ ಒಪ್ಪಂದವನ್ನು ರದ್ದುಪಡಿಸುವ ಅಧಿಕಾರವು ಜಂಟಿ ಆಯುಕ್ತರವರು ಹೊಂದಿರುತ್ತಾರೆ.

12. ಯಾವುದೇ ತಿಂಗಳಿನ ವಾಹನ ಬಾಡಿಗೆ ಹಣವನ್ನು ಅದರ ಮುಂದಿನ ತಿಂಗಳು ವಾಹನ ಮಾಲೀಕರು ಸಲ್ಲಿಸುವ ಬಿಲ್ಲಿನ ಆಧಾರದ ಮೇಲೆ ಪಾವತಿಸಲಾಗುವದು. ಕಛೇರಿ ಮುಖ್ಯಸ್ಥರಿಂದ/ಹಂಚಿಕೆಯಾದ ಅಧಿಕಾರಿಯವರಿಂದ ವಾಹನದ ಲಾಗ್ ಪುಸ್ತಕದ ಆ ತಿಂಗಳಿಗೆ ಸಂಬಂಧಿಸಿದಂತೆ ವಾಹನ ಚಾಲನೆಯ ಬಗೆಗಿನ ದೃಢೀಕೃತವಾದ ನಕಲು ಪ್ರತಿ ಮತ್ತು ವಾಹನ ಉಪಯೋಗಿಸಿದ ಕಛೇರಿಯ ಮುಖ್ಯಸ್ಥರು/ಹಂಚಿಕೆಯಾದ ಅಧಿಕಾರಿಯವರಿಂದ ಸೂಕ್ತ ಪ್ರಮಾಣ ಪತ್ರದ ಜೊತಗೆ ವಾಹನದ ಬಾಡಿಗೆಯ ಬಿಲ್ಲನ್ನು ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.

13. ವಾಹನವನ್ನು ಸರ್ಕಾರಿ ಕೆಲಸಕ್ಕೆ ಉಪಯೋಗಿಸುವಾಗ ಕರ್ನಾಟಕ ಸರ್ಕಾರಿ ಕೆಲಸದ ಸೇವೆಯಲ್ಲಿ ಎಂಬ ನಾಮಫಲಕವಿರಬೇಕು. ಪಾರ್ಕಿಂಗ್ ಶುಲ್ಕ ಟೋಲ್ ಶುಲ್ಕ ಹಾಗೂ ಇತ್ಯಾದಿಗಳನ್ನು ವಾಹನ ಮಾಲೀಕರೇ/ಚಾಲಕರೇ ಭರಿಸತಕ್ಕದ್ದು.

14. ವಾಹನವನ್ನು ಚಾಲನೆ ಮಾಡುವಾಗ ಮತ್ತು ಕರ್ತವ್ಯದಲ್ಲಿರುವಾಗ ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸತಕ್ಕದ್ದು.

15. ವಾಹನದ ಯಾವುದೇ ಕಾನೂನು ಉಲ್ಲಂಘನೆಗೆ ಸ್ವತ: ಮಾಲೀಕರೇ ಜವಾಬ್ದಾರರಾಗಿರುತ್ತಾರೆ.

16. ವಾಹನವು ಕಛೇರಿಯ ಕೆಲಸಕ್ಕೆ ಉಪಯೋಗಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಂದ ಕಾಲಕಾಲಕ್ಕೆ ಸರಿಯಾಗಿ ವಾಹನವನ್ನು ಉಪಯೋಗಿಸಿದ ವಿವರದೊಂದಿಗೆ ಟ್ರಿಪ್ ಶೀಟ್‌ನಲ್ಲಿ ಭರ್ತಿ ಮಾಡಿ ಸಹಿ ಮಾಡುವುದು.

17. ಈ ಇಲಾಖೆಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವಂತಹ ಅವಧಿಯಲ್ಲಿ ಬೇರೆ ಯಾವುದೇ ಇಲಾಖೆಯಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಅಥವಾ ಬೇರೆ ಇನ್ನಾವುದೇ ಕೆಲಸಗಳಿಗೆ ವಾಹನಗಳನ್ನು ಉಪಯೋಗಿಸುವಂತಿಲ್ಲ ಹಾಗೂ ವಾಹನವನ್ನು ಪೂರ್ಣವಾಗಿ ವಾಣಿಜ್ಯ ತೆರಿಗೆ ಇಲಾಖಾ ಸೇವೆಗಾಗಿ ಮೀಸಲಿಡತಕ್ಕದ್ದು.

18. ಅಧಿಕಾರಿಗಳು ರಜೆ/ಅನ್ಯಸೇವೆ/ಇನ್ನಾವುದೇ ಕಛೇರಿ ಕಾರ್ಯನಿಮಿತ್ತ ಕಛೇರಿಯಿಂದ ಹೊರಗೆ ತೆರಳಿದ ಸಂದರ್ಭದಲ್ಲಿ ಅವರಿಗೆ ಸಂಬಂಧಿಸಿದ ವಾಹನ ಚಾಲಕರು ಆ ದಿನ ಪೂರ್ವಾಹ್ನ 10-00 ಗಂಟೆಗೆ ಕಡ್ಡಾಯವಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು) ಕಲಬುರಗಿ ಇವರ ಬಳಿ ವರದಿ ಮಾಡಿಕೊಂಡು ಕಛೇರಿ ಆವರಣದಲ್ಲಿಯೇ ವಾಹನದೊಂದಿಗೆ ಇರತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಗೈರು ಹಾಜರು ಎಂದು ಪರಿಗಣಿಸಿ ಆ ದಿನದ ಸಂಭಾವನೆಯನ್ನು ಕಡಿತಗೊಳಿಸಲಾಗುವುದು.

19. ಖಾಸಗಿ ವಾಹನ ಮಾಲೀಕರು ಮಾಸಿಕ ಬಾಡಿಗೆಗೆ ಸಂಬಂಧಿಸಿದಂತೆ ಈ ಕಛೇರಿಗೆ ಬಿಲ್ಲುಗಳನ್ನು ಸಲ್ಲಿಸುವಾಗ ಮಾಹೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಗಳು, ಒಟ್ಟು ಓಡಿಸಿದ ಕಿಲೋ ಮೀಟರ್ ಮತ್ತು ಸಮಯಕ್ಕೆ ಸಂಬಂಧಿಸಿದ ದೃಢೀಕೃತ ಪ್ರಮಾಣ ಪತ್ರವನ್ನು ಅಧಿಕಾರಿಗಳಿಂದ ಪಡೆದು ಬಿಲ್ಲಿನ ಜೊತೆ ಸಲ್ಲಿಸುವುದು.

20. ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿರುವುದು ಮತ್ತು ನಿರ್ಲಕ್ಷಿಸಿರುವುದು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೇ ಹೊರಗುತ್ತಿಗೆ ಆಧಾರದ ಕರಾರನ್ನು ರದ್ದುಪಡಿಸಲಾಗುವುದು.

21. ವಾಹನ ಚಾಲಕರು ಒಂದು ವೇಳೆ ಕರಾರು ಒಪ್ಪಂದವನ್ನು ರದ್ದುಪಡಿಸಬೇಕಾದರೆ, ಒಂದು ತಿಂಗಳು ಮುಂಚಿತವಾಗಿ ಈ ಕಛೇರಿಗೆ ಲಿಖಿತ ಮೂಲಕ ತಿಳಿಸಬೇಕು. ತಪ್ಪಿದ್ದಲ್ಲಿ, ಒಂದು ತಿಂಗಳ ವಾಹನದ ಬಾಡಿಗೆ ಮೊತ್ತವನ್ನು ನೀಡಲಾಗುವುದಿಲ್ಲ. ಹಾಗೂ ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ಆಯುಕ್ತರು/ಜಂಟಿ ಆಯುಕ್ತರವರದ್ದಾಗಿರುತ್ತದೆ.

22. ಆದಾಯ ತೆರಿಗೆ, ತೆರಿಗೆ ಹಾಗೂ ಮುಂದೆ ಉದ್ಭವಿಸಬಹುದಾದ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಕಟಾವಣೆ ಮಾಡಿ ಸಲ್ಲಿಸಬೇಕಾದ ಮೊತ್ತವನ್ನು ಕಡಿತಗೊಳಿಸಿ ಉಳಿದ ಮೊತ್ತವನ್ನು ಪಾವತಿಸಲಾಗುವುದು.

23. ಯಾವುದೇ ಮುನ್ಸೂಚನೆ ನೀಡದೆ ಚಾಲಕರ ಸೇವೆಯನ್ನು ರದ್ದುಗೊಳಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು) ಕಲಬುರಗಿ, ವಾಣಿಜ್ಯ ತೆರಿಗೆ ಕಾರ್ಯಾಲಯ ನೆಲ ಮಹಡಿ, ರೈಲ್ವೆ ಸ್ಟೇಷನ್ ಹತ್ತಿರ, ಕಲಬುರಗಿ-585102 ಇವರು ಹೊಂದಿರುತ್ತಾರೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಮನವಿಗಳು) ಕಲಬುರಗಿ ವಿಭಾಗ, ಕಲಬುರಗಿ

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಮನವಿಗಳು) ಕಲಬುರಗಿ ವಿಭಾಗ
ಕಲಬುರಗಿ

# ಅರ್ಜಿ ನಮೂನೆ

ಭಾವಚಿತ್ರ

| | | |
|---|---|---|
| 1) | ಅರ್ಜಿದಾರರ ಹೆಸರುದಪ್ಪ ಅಕ್ಷರಗಳಲ್ಲಿ<br>(ದಪ್ಪ ಅಕ್ಷರಗಳಲ್ಲಿ) | |
| 2) | ಅರ್ಜಿದಾರರ ವಿಳಾಸ (ಖಾಯಂ) | |
| 3) | ವಿಳಾಸದ ದಾಖಲೆಗಳು<br>(ಮತದಾರರಗುರುತಿನಚೀಟಿ/ರೇಷನ್‌ಕಾರ್ಡ/ಆಧಾರ್‌ಕಾರ್ಡ/ಪಾಸ್‌ಪೋರ್ಟ/<br>ಅಥವಾಇತರೆ ಭಾವಚಿತ್ರ ಹೊಂದಿರಿವಚುನಾವಣಾಗುರುತಿನಚೀಟಿ | |
| 4) | ಬ್ಯಾಂಕ್‌ಖಾತೆಯ ವಿವರಗಳು | |
| 5) | ಪ್ಯಾನ್‌ಕಾರ್ಡ | |
| 6) | ಡ್ರೈವಿಂಗ್ ಲೈಸನ್ಸ್ | |
| 7) | ಚಾಲಕರದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ | |
| 8) | ವಾಹನದ ನೋಂದಣಿ ಪುಸ್ತಕದ ಪ್ರತಿ | |
| 9) | ವಾಹನದ ವಿಮಾ ಪಾಲಿಸಿ ಪ್ರತಿ | |
| 10) | ಪ್ರಾದೇಶಿಕ ಸಾರಿಗೆ ಅಧಿಕಾರಿ ನೀಡಿದ ವಾಹನ ಚಾಲನಾ ಪರವನಾಗಿ ಪತ್ರ | |
| 11) | ರಸ್ತೆತೆರಿಗೆ ಸಂಬಂಧಿಸಿದ ಇಲಾಖೆಗೆ ಪಾವತಿಸಿದ ಪ್ರತಿ | |
| 12) | ವಾಯು ಮಾಲಿನ್ಯಇಲಾಖೆಯಿಂದ ಪಡೆದ ಪ್ರಮಾಣ ಪತ್ರ | |
| 13) | ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸತತ 5 ವರ್ಷ ಸೇವೆ ಸಲ್ಲಿಸದೇ ಇರುವ ಬಗ್ಗೆ ಪ್ರಮಾಣ ಪತ್ರ | |

ಸಹಿ/-

# <u>ಅರ್ಜಿ ನಮೂನೆ</u>

| | |
|---|---|
| ಭಾವಚಿತ್ರ | |

| | | |
|---|---|---|
| 1) | ಅರ್ಜಿದಾರರ ಹೆಸರುದಪ್ಪ ಅಕ್ಷರಗಳಲ್ಲಿ<br>(ದಪ್ಪ ಅಕ್ಷರಗಳಲ್ಲಿ) | |
| 2) | ಅರ್ಜಿದಾರರ ವಿಳಾಸ (ಖಾಯಂ) | |
| *3)* | ವಿಳಾಸದ ದಾಖಲೆಗಳು<br>*(ಮತದಾರರಗುರುತಿನಚೀಟಿ/ರೇಷನ್‌ಕಾರ್ಡ/ಆಧಾರ್‌ಕಾರ್ಡ/ಪಾಸ್‌ಪೋರ್ಟ/*<br>ಅಥವಾಇತರೆ ಭಾವಚಿತ್ರ ಹೊಂದಿರಿವಚುನಾವಣಾಗುರುತಿನಚೀಟಿ | |
| 4) | ಬ್ಯಾಂಕ್‌ಖಾತೆಯ ವಿವರಗಳು | |
| 5) | ಪ್ಯಾನ್‌ಕಾರ್ಡ | |
| 6) | ಡ್ರೈವಿಂಗ್ ಲೈಸನ್ಸ್ | |
| 7) | ಚಾಲಕರದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ | |
| 8) | ವಾಹನದ ನೋಂದಣಿ ಪುಸ್ತಕದ ಪ್ರತಿ | |
| 9) | ವಾಹನದ ವಿಮಾ ಪಾಲಿಸಿ ಪ್ರತಿ | |
| 10) | ಪ್ರಾದೇಶಿಕ ಸಾರಿಗೆ ಅಧಿಕಾರಿ ನೀಡಿದ ವಾಹನ ಚಾಲನಾ ಪರವನಾಗಿ ಪತ್ರ | |
| 11) | ರಸ್ತೆತೆರಿಗೆ ಸಂಬಂಧಿಸಿದ ಇಲಾಖೆಗೆ ಪಾವತಿಸಿದ ಪ್ರತಿ | |
| 12) | ವಾಯು ಮಾಲಿನ್ಯಇಲಾಖೆಯಿಂದ ಪಡೆದ ಪ್ರಮಾಣ ಪತ್ರ | |
| 13) | ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸತತ 5 ವರ್ಷ ಸೇವೆ ಸಲ್ಲಿಸದೇ ಇರುವ<br>ಬಗ್ಗೆ ಪ್ರಮಾಣ ಪತ್ರ | |

ಸಹಿ/-